ಈ) ಕಳೆದ 5 ವರ್ಷಗಳಿಂದ ಸದರಿ ಖಾಯಿಲೆಗೆ ತುತ್ತಾದ ಜನರ ಸಂಖ್ಯೆ:

ವಿವರ	2009	2010	2011	2012	2013	2014	2015	ಒಟ್ಟು
ಮಾದರಿ ಪರೀಕ್ಷಿಸಿದ್ದು	8504	12952	2699	4472	1870	2349	5933	38779
ಪ್ರಯೋಗಾಲಯದಲ್ಲಿ ದೃಢೀಕರಿಸಿದ ಪ್ರಕರಣಗಳು	1799	2552	108	878	122	303	2279	8041

ಕಳೆದ 5 ವರ್ಷಗಳಿಂದ ಮರಣ ಹೊಂದಿರುವವರ ವಿವರ ಈ ಕೆಳಗಿನಂತಿದೆ.

ವರ್ಷ	2011	2012	2013	2014	2015
ಮರಣಗಳು	16	48	19	34	71

ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ

53 (2795); ಶ್ರೀ ಎಂ.ಟಿ.ಬಿ. ನಾಗರಾಜ್ (ಹೊಸಕೋಟೆ)

ಅ) ಹೊಸಕೋಟೆ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯಕತೆಯಿರುವ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅವಶ್ಯಕ ಔಷಧಿಗಳನ್ನು ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯಕತೆ ಇರುವ ಔಷಧಿಗಳು ಲಭ್ಯವಿದ್ದರೂ ಸಹ ವೈದ್ಯರು ರೋಗಿಗಳಿಗೆ ಔಷಧಿಗಳನ್ನು ವಿತರಿಸದೆ ಹೊರಗಡೆಯಿಂದ ಔಷಧಿ ಕೊಂಡುಕೊಳ್ಳಲು ಚೀಟಿಯನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಅಂತಹ ವೈದ್ಯಾಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಬಿಎಂಟಿಸಿ ಸಂಚಾರ ವ್ಯವಸ್ಥೆಗಾಗಿ ಆಧುನಿಕ ತಂತ್ರಜ್ಞಾನದ ಬಳಕೆ

54 (3660); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಬಿಎಂಟಿಸಿ ಸಂಚಾರ ಸುವ್ಯವಸ್ಥೆಗಾಗಿ ಮತ್ತು ಕಾರ್ಯನಿರ್ವಹಣೆಯ ದಿಶೆಯಲ್ಲಿ ಕೈಗೊಂಡ ಆಧುನಿಕ ತಂತ್ರಜ್ಞಾನ ವಿವರಗಳೇನು; ಅವುಗಳ ಉಪಯುಕ್ತತೆ ಮತ್ತು ನಾಗರೀಕರಿಗೆ ಅವುಗಳ ಬಳಕೆಗಾಗಿ ಒದಗಿಸಿಕೊಟ್ಟಿರುವ ಸುಲಭ ಮತ್ತು ಸರಳ ವಿಧಾನಗಳೇನು;

ಆ) ಬಿಎಂಟಿಸಿ ಬಸ್‌ಗಳಿಗೆ ಜಿಪಿಎಸ್ ಆಧಾರಿತ ಐಟಿಎಸ್ ತಂತ್ರಜ್ಞಾನ ಅಳವಡಿಕೆಗೆ ಕೈಗೊಂಡ ಕ್ರಮಗಳೇನು;

ಇ) ಪ್ರಯಾಣಿಕ ಸ್ನೇಹಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮತ್ತು ನೂತನ ತಂತ್ರಜ್ಞಾನ ಬಳಕೆಯು ಎಲ್ಲಾ ವರ್ಗದ ಪ್ರಯಾಣಿಕರಿಗೆ ತಲುಪುವಂತಾಗಲು ಸಂಸ್ಥೆಯು ಪರಿಣಾಮಕಾರಿ ಯೋಜನೆಗಳು ಯಾವುವು; ತಂತ್ರಾಶ ಸೌಲಭ್ಯಗಳ ನಿರ್ವಹಣೆಗಾಗಿ ಸಂಸ್ಥೆಯು ಜರುಗಿಸಿರುವ ವ್ಯವಸ್ಥಾ ಎಲ್ಲಾ ಕ್ರಮಗಳೇನು ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಂಚಾರ ಸುವ್ಯವಸ್ಥೆಗಾಗಿ ಮತ್ತು ಕಾರ್ಯನಿರ್ವಹಣೆಯ ದಿಶೆಯಲ್ಲಿ ಈ ಕೆಳಗಿನ